**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 34/2025** ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ.2

| | |
|---|---|
| ಸಾಕ್ಷಿದಾರರ ಹೆಸರು | ಹೊನ್ನಪ್ಪ |
| ತಂದೆಯ ಹೆಸರು | ಶಿವಲಿಂಗಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಿಳಾಸ | ಚಿಕ್ಕಲಕ್ಕಿ, ತಾಲೂಕು ಜಮಖಂಡಿ |

ದಿನಾಂಕಃ 19-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ಚಾಸಾ-1 ನನ್ನ ಮಾವ. ಚಾಸಾ-5 ಮತ್ತು 6 ನನ್ನ ಪರಿಚಯವರು. ಚಾಸಾ-3 ಮತ್ತು 4 ಗೊತ್ತಿಲ್ಲ. ಘಟನೆ ನಡೆಯುವ ಸುಮಾರು 8 ತಿಂಗಳ ಹಿಂದೆ ನಾನು ಕೂಲಿ ಕೆಲಸಕ್ಕಾಗಿ ಉಡುಪಿಗೆ ಬಂದಿದ್ದೆ. ಆಗ ಗೌಂಡಿ ಕೆಲಸ ಮಾಡಿಕೊಂಡಿದ್ದೆವು. ಆಗ ಕೃಷ್ಣ ಮಠದ ಬಳಿಯ ಪಾರ್ಕಿಂಗ್ ಜಾಗದಲ್ಲಿ ಮಲಗುತ್ತಿದ್ದೆವು. ಉಡುಪಿಯ ಸಿಟಿ ಬಸ್ಸು ನಿಲ್ದಾಣದ ಬಳಿ ನಮ್ಮನ್ನು ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು.

2) ತಾರೀಕು 20-03-2025 ರಂದು ರಾತ್ರಿ 9.00 ಗಂಟೆಗೆ ಕೃಷ್ಣ ಮಠದ ಪಾರ್ಕಿಂಗ್ ಜಾಗೆಯಲ್ಲಿ ಮಲಗಿದ್ದಾಗ, ಚಾಸಾ-1 ಈತನ ಬಳಿಯಲ್ಲಿ ಇದ್ದ ಮೊಬೈಲ್ ನ್ನು ನೋಡುತ್ತಿದ್ದೆವು. ಆಗ ಒಬ್ಬ ಅಪರಿಚಿತ ವ್ಯಕ್ತಿ ಬಂದು ಮೊಬೈಲ್ ಕೊಡಬೇಕೆಂದು ಕೇಳಿದ್ದ, ಆಗ ನಾವು ಕೊಡದೇ ಇದ್ದಾಗ, ಅಪರಿಚಿತ ವ್ಯಕ್ತಿ ನನಗೆ ಎದೆಯ ಎಡಭಾಗಕ್ಕೆ ಚಾಕುವಿನಿಂದ ಮೊದಲು ಚುಚ್ಚಿದ್ದ. ನಂತರ ಚಾಸಾ-1 ಈತನಿಗೂ ಸಹ ಚಾಕುವಿನಿಂದ ಚುಚ್ಚಿದ್ದ. ಆಗ ಅಲ್ಲಿಗೆ ಬಂದಿದ್ದ ಇನ್ನೊಬ್ಬ ವ್ಯಕ್ತಿಗೂ ಈ ಅಪರಿಚಿತ ವ್ಯಕ್ತಿ ಚುಚ್ಚಿದ್ದ.

ನಮಗೆ ಚುಚ್ಚಿದ್ದ ವ್ಯಕ್ತಿ ಎಲ್ಲಿಗೆ ಹೋಗಿದ್ದನು ಎಂದು ನನಗೆ ಗೊತ್ತಿಲ್ಲ. ಆಗ ನನಗೆ ಆರೋಪಿ ಚುಚ್ಚಿದ್ದರಿಂದ ನನ್ನ ಪಕ್ಕೆ ಮತ್ತು ಬೆನ್ನುಗಳಲ್ಲಿ ಗಾಯವಾಗಿತ್ತು.

3) ನಂತರ ನಮ್ಮನ್ನು ಅಜ್ಜರಕಾಡು ಆಸ್ಪತ್ರೆಗೆ ಸೇರಿಸಿ , ಉಪಚರಿಸಿದ್ದರು. ಅಲ್ಲಿಗೆ ನಾನು ಒಬ್ಬನೇ ಹೋಗಿದ್ದೆ. ಚಾಸಾ-1 ಈತನನ್ನು ಯಾರು ಆಸ್ಪತ್ರೆಗೆ ಸೇರಿಸಿದ್ದರು ಎಂದು ಗೊತ್ತಿಲ್ಲ. ನಾವು ಎರಡು ದಿನ ಆಸ್ಪತ್ರೆಯಲ್ಲಿ ಇದ್ದೆವು. ಆದಿನ ನಮಗೆ ಹಲ್ಲೆ ಮಾಡಿದ ವ್ಯಕ್ತಿಯನ್ನು ಈದಿನ ವಿಸಿ ಮೂಲಕ ನೋಡಿ ಗುರುತಿಸಿದ್ದೇನೆ. ಆದಿನ ಹಲ್ಲೆ ಮಾಡಿದ ಚಾಕುವನ್ನು ಗುರುತಿಸಬಲ್ಲೆ. ಅದು ಎಂಒ-1. ಅದನ್ನು ಈಗ ನೋಡಿ ಗುರುತಿಸಿದ್ದೇನೆ.

4) ಘಟನೆಯಾದ 3 ದಿನಗಳ ನಂತರ ಪೊಲೀಸರು ಆ ಜಾಗೆಗೆ ಬಂದಿದ್ದರು. ಆಗ ಪೊಲೀಸರಿಗೆ ಘಟನೆಯಾದ ಜಾಗೆಯನ್ನು ನಾನೇ ತೋರಿಸಿದ್ದೆ. ಆದಿನ , ಆಗ ನನ್ನೊಂದಿಗೆ ಚಾಸಾ-5 ಮತ್ತು 6 ಸಹ ಇದ್ದರು. ಪೊಲೀಸರು ಅಲ್ಲಿ ಸುಮಾರು ಅರ್ಧ ಗಂಟೆ ತನಿಖೆ ಮಾಡಿದ್ದರು. ಆದಿನ ನನ್ನ ಸಹಿಯನ್ನು ಸಹ ಪಡೆದಿದ್ದರು. ಸಹಿ ಇರುವ ದಾಖಲೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-8** ಎಂದು, ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-8(ಎ)** ಎಂದು ಗುರುತಿಸಿದ್ದೇನೆ. ಆಗ ತೆಗೆದಿದ್ದ ಪೋಟೋವನ್ನು ಈಗ ನೋಡಿ ಅದನ್ನು **ನಿಶಾನೆ ಪಿ-9** ಎಂದು ಗುರುತಿಸಿದ್ದೇನೆ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅವಕಾಶ ಕೊರಿದ್ದು , ಸರಕಾರಿ ಅಭಿಯೋಜಕರಿಗೆ ಪಾಟೀಸವಾಲಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ನಾನು ಈಗ ನೋಡಿ ಗುರುತಿಸಿದ ಆರೋಪಿ, ಆದಿನ ಮೊದಲು ಚಾಸಾ-1 ಈತನ ಬಳಿ ಮೊಬೈಲ್ ಕೇಳಿ, ಆತನಿಗೆ ಮೊದಲು ಹಲ್ಲೆ ಮಾಡಿದ್ದ ಎಂದರೆ ನಿಜ. ಆತನಿಂದ ತಪ್ಪಿಸಿಕೊಳ್ಳಲು ಚಾಸಾ-1 ಓಡಿದ್ದ ಎಂದರೆ ನಿಜ. ಆಗ ಆತನಿಗೆ ಆರೋಪಿ ಬೆನ್ನಟ್ಟಿದ್ದ. ಆಗ ಆರೋಪಿ ಆತನಿಗೆ ಅವಾಚ್ಯವಾಗಿ ಬೈದು , ಆತನನ್ನು ಕೊಲ್ಲುತ್ತೇನೆಂದು ಹೇಳುತ್ತಿದ್ದ ಎಂದರೆ ನಿಜ. ನಂತರ ಆತನನ್ನು ಅಡ್ಡಗಟ್ಟಿ, ಆರೋಪಿ ಆತನಿಗೆ ಪುನಃ ಹಲ್ಲೆ

ಮಾಡಿಲ್ಲ ಎಂದರೆ ನಿಜ. ಆಗ ನಾನು ಚಾಸಾ-1 ಈತನನ್ನು ಬಿಡಿಸಲು ಹೋಗಿದ್ದೆ ಎಂದರೆ ನಿಜ. ಆಗ ಆರೋಪಿ ನನಗೂ ಹಲ್ಲೆ ಮಾಡಿದ್ದ. ಆಗ ಬಿಡಿಸಲು ಬಂದ ಇನ್ನೊಬ್ಬ ವ್ಯಕ್ತಿಗೆ ಆರೋಪಿ ಹಲ್ಲೆ ಮಾಡಿದ್ದ ಎಂದರೆ ನಿಜ. ಆ ಸಮಯದಲ್ಲಿ ಅಲ್ಲಿ ಜನ ಸೇರಿದ್ದರಿಂದ, ಆರೋಪಿ ಚಾಕುವಿನೊಂದಿಗೆ ಅಲ್ಲಿಂದ ಓಡಿ ಹೋಗಿದ್ದ ಎಂದರೆ ನಿಜ. ಮೊದಲು ಚಾಸಾ-1 ಈತನನ್ನು ಆಸ್ಪತ್ರೆಗೆ ಅಟೋದಲ್ಲಿ ಕರೆದುಕೊಂಡು ಹೋಗಿದ್ದರು ಎಂದರೆ ನಿಜ. ಅದಕ್ಕಾಗಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ನಿಜ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಪಿ. (ಎಲ್.ಎ.ಡಿ.ಸಿ) ವಕೀಲರಿಂದ**

1) ಆರೋಪಿತನನ್ನು ನಾನು ಇದೇ ದಿನ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆತನನ್ನು ಹಲ್ಲೆಯಾದ ದಿನ ನಾನು ಮೊದಲ ಬಾರಿ ನೋಡಿದ್ದೇನೆ. ಕೃಷ್ಣ ಮಠದ ಪಾರ್ಕಿಂಗ್ ಜಾಗೆಯಲ್ಲಿ ನೂರಾರು ಜನ ಕಾರ್ಮಿಕರು ಮಲಗಿರುತ್ತಾರೆ ಎಂದರೆ ನಿಜ. ಅಲ್ಲಿ ಕಾರ್ಮಿಕರಲ್ಲಿ ಮದ್ಯಪಾನವಾಗಿ ಗುಂಪು ಘರ್ಷಣೆಯಾಗುತ್ತಿರುತ್ತದೆ ಎಂದರೆ ನಿಜ. ಆದಿನ ಆಗಿದ್ದ ಘಟನೆ ಗುಂಪಿನಲ್ಲಿ ಆದ ಘರ್ಷಣೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿದಾರರು ಪ್ರಶ್ನೆಗಳನ್ನು ತಿಳಿದುಕೊಂಡು ಉತ್ತರಗಳನ್ನು ಕೊಡುವಲ್ಲಿ ಹೆಚ್ಚಿನ ವೇಳೆ ಕಳೆಯುತ್ತಿದ್ದು, ಬೇರೆ ಕೇಸುಗಳಲ್ಲಿಯ ಸರಕಾರಿ ಸೇವೆಯ ಸಾಕ್ಷಿದಾರರು ಇದ್ದುದರಿಂದ, ವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.

**ಪಿ.ಡಬ್ಲ್ಯೂ.4/ಸಿ.ಡಬ್ಲ್ಯೂ.2**